ಮಾಡಲು ತಡವಾಗಿದೆ. ಏತಕ್ಕೋಸ್ಕರ ತಡವಾಯಿತು ಎಂದು ಕೇಳಿದ್ದಕ್ಕೆ ತಾಂತ್ರಿಕ ಕಾರಣಗಳಿಂದಾಗಿ ಅದನ್ನು ಸ್ಥಾಪಿಸುವುದಕ್ಕೆ ವಿಳಂಬವಾಗಿದೆ ಎಂದು ಹೇಳಿದ್ದಾರೆ. ತಾಂತ್ರಿಕ ದೋಷಗಳನ್ನು ಸರಿಪಡಿಸುವುದಕ್ಕೆ ಐದೂವರೆ ವರ್ಷಕಾಲ ಬೇಕಾಗಿದೆ. ಆ ಯಂತ್ರವನ್ನು ಯಾವ ಕಂಪನಿಯಿಂದ ಕೊಳ್ಳಲಾಯಿತು ? ಯಂತ್ರದ ಬೆಲೆ ಏನು ?

ಶ್ರೀ ವೈ. ರಾಮಕೃಷ್ಣ. ಆ ಯಂತ್ರವನ್ನು ೧೯೭೭ನೇ ಇಸವಿಯಲ್ಲಿ ಕೊಂಡುಕೊಂಡರೂ ನಮಗೆ ೧೯೭೮ನೇ ಇಸವಿಯಲ್ಲಿ ಡೆಲಿವರಿ ಕೊಟ್ಟರು. ಕೊಂಡಂತಹ ಕಂಪನಿ 'ಬಾಟ್ಲಿಬಾಯ್' ಕೊಯಮತ್ತೂರು. ಮಿಷನ್ ಜೋಡಿಸಬೇಕಾದರೆ ಕಟ್ಟಡದ ಹೈಟನ್ನು ಕಡಿಮೆ ಮಾಡಬೇಕೆಂದು ಕಂಪನಿಯವರು ಸಲಹೆ ಕೊಟ್ಟರು, ಅದಕ್ಕೋಸ್ಕರ ಆ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ಈ ಫಾಕ್ಟರಿಯನ್ನು ಮಂಧ್ಯದಲ್ಲಿ 'ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್'ಗೆ ವಹಿಸಲಾಗಿದೆ. ಅಷ್ಟರಲ್ಲಿ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಬಂತು. ಬಿಲ್ಡಿಂಗ್‌ನ್ನು ಒಡೆಯುವುದಕ್ಕಿಂತ ಹಾಗೆಯೇ ಸರಿಪಡಿಸಲು ಅಂದಾಜು ತಯಾರು ಮಾಡಲಾಗಿದೆ. ಆ ಅಂದಾಜು ಮೆಚ್ಚಿ ೩೦ ಲಕ್ಷ ರೂಪಾಯಿಂಗಳು, ಕೆಲಸ ನಡೆಯುತ್ತಿದೆ. ೧೯೮೩ನೇ ಇಸವಿಯಲ್ಲಿ ಕೆಲಸ ಕಂಪ್ಲೀಟ್ ಆಗುತ್ತದೆ, ಮಿಷನ್ ಎರಕ್ಟ್ ಆಗುತ್ತದೆ.

ಶ್ರೀ ಡಿ. ಟಿ, ರಾಮು.—ಮಾನ್ಯ ಅಧ್ಯಕ್ಷರೇ, ೫½ ವರ್ಷದ ಹಿಂದೆ ಕೊಂಡುಕೊಡಂತಂಹ ಯಂತ್ರವನ್ನು ಸ್ಥಾಪನೆ ಮಾಡುವುದಕ್ಕೆ ಇಷ್ಟು ಕಾಲ ಬೇಕಾಯಿತು ಎಂದರೆ ನನಗೆ ತುಂಬಾ ಆಶ್ಚರ್ಯವಾಗುತ್ತಿದೆ. ಅಲ್ಲಿ ಕಾರ್ಮಿಕರು ಆ ದೂಳು ಕುಡಿಯುವುದರಿಂದ ಅವರಿಗೆ ಟಿ. ಬಿ. ಬರುತ್ತಿದೆ, ಅದು ಬರದೇ ಇರಲಿ ಎಂದು ಹೇಳಿ, ಈಗ ಈರುಳ್ಳಿ ಕೊಡುತ್ತಿದ್ದಾರೆ ಮತ್ತು ಆಲೋಯನ್ಸನ್ನು ಕೊಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಇಂತಹ ಒಂದು ಪ್ರಮುಖ ವಿಚಾರದಲ್ಲಿ ಆ ಕಾರ್ಮಿಕರ ಆರೋಗ್ಯವನ್ನಿ ಕಾಪಾಡತಕ್ಕಂಥ ಹಿತದೃಷ್ಟಿಯಿಂದ ಆ ಯಂತ್ರವನ್ನು ತರಿಸಿ ಅದನ್ನು ಸ್ಥಾಪನೆ ಮಾಡತಕ್ಕಂಥ ಕಾಲದಲ್ಲಿ ಇಷ್ಟು ನಿಧಾನವಾಗಬೇಕಾದರೆ ಏನು ಕಾರಣ ಎಂದು ಕೇಳುತ್ತೇನೆ. ಆ ಬಾಟ್ಲಿಬಾಯಿ ಕಂಪನಿಯವರು ಆ ಯಂತ್ರವನ್ನು ಓದಗಿಸಿಕೊಡುವಲ್ಲಿ ಏನಾದರೂ ತಡಮಾಡಿದರೇ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಆ ಕಂಪನಿಯವರು ಒಂದು ಜನರೇಟರನ್ನು ಕೊಟ್ಟಿದ್ದಾರೆ ಎಂದು ತಿಳಿಯಿತು. ನಮಗೆ ಸ್ಯೂಯಿಂಗ್ ಮಿಷನ್ಸ್ ಒದಗಿಸುತ್ತಿರುವುದು ಆ ಬಾಟ್ಲಿಬಾಯಿ ಕಂಪನಿಯವರು ಎಂದು ಕಾಣುತ್ತವೆ. ಆ ಒಂದು ಕಂಪನಿಗೆ ಏತಕ್ಕೆ ಆರ್ಡರ್ಸ್ ಕೊಟ್ಟರೋ ಗೊತ್ತಿಲ್ಲ. ನನಗೆ ಗೊತ್ತಿರುವಂತೆ ಇಂತಹ ಒಂದು ನಿಧಾನ ಪ್ರವೃತ್ತಿಗೆ ಆ ಕಾರ್ಖಾನೆಯಲ್ಲಿ ಕೆಲಸಮಾಡತಕ್ಕಂಥ ಜನರಲ್ ಮ್ಯಾನೇಜರ್ ಯಾರಿದ್ದಾರೆ ಅವರೇ ಕಾರಣ. ಇಷ್ಟು ಅಧ್ಯಕ್ಷತೆಗೆ ಅವಕಾಶ ಮಾಡಿಕೊಟ್ಟಿರುವಂತ ಆ ಅಧಿಕಾರಿಯ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಮತ್ತು ಅಲ್ಲಿ ಕಾರ್ಮಿಕರ ಕಲ್ಯಾಣಕ್ಕೋಸ್ಕರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಆ ಯಂತ್ರವನ್ನು ಸ್ಥಾಪನೆ ಮಾಡುವುದಕ್ಕೆ ಇಷ್ಟು ಡಿಲೇ ಏತಕ್ಕೆ ಆಯಿತು ಎನ್ನುವ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದಕ್ಕೆ ಕಾರಣವಾಗಿರತಕ್ಕಂಥ ಅಧಿಕಾರಿ ಏನಿದ್ದಾರೆ ಅವರು ಇದನ್ನು ಇನ್‌ವೆಸ್ಟಿಗೇಷನಲ್ ಆಗಿ ಮಾಡಿದ್ದಾರೆ ಎಂಬುದು ಗೊತ್ತಾದರೆ ಖಂಡಿತವಾಗಿಯೂ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಇನ್ನು ಈ ಕಾರ್ಮಿಕರ ಹಿತದೃಷ್ಟಿಯಿಂದ ಅಲ್ಲಿ ದೂಳು ಕುಡಿದುಕೊಂಡು ಕೆಲಸಮಾಡತಕ್ಕಂಥ ಕಾರ್ಮಿಕರಿಗೆ ವಿಶೇಷವಾದ ಉಡುಪನ್ನು ಕೊಡುತ್ತೇವೆ ಮತ್ತು ರಿಸ್ಕ್ ಆಲೋಯನ್ಸನ್ನೂ ಕೊಡುತ್ತೇವೆ ಎಂದು ಹೇಳುತ್ತೇನೆ.

## Opening of Munsiff Court at Thirthahalli

1119 SRI KADIDAL DIVAKAR (Thirthahalli).—Will the Minister for Law and Parliamentary Affairs, Veterinary and Animal Husbandry be pleased to state.—

(a) whether requisition has been received for opening a Munsiff Court at Thirthalli ;

(b) if so, the action taken by the Government in this regard so far ;

(c) the number of cases (Civil and Criminal Cases) pertaining to Thirthahalli Taluk which are pending in different Courts of Shimoga District ?

SRI Y. RAMAKRISHNA (Minister for Law Parliamentary Affairs, Veterinary and Animal Husbandry).—

(a) Yes.

(b) Government of Karnataka has decided for establishing a Munsiff Magistrates' Court at Thirthahalli Taluk of Shimoga District In consultation with the High Court of Karnataka. The Court would be established after the date from which it has to be functioned is made known by the High Court.

(c) The Civil and Criminal Cases pertaining to Thirthahalli Taluk pending at the Munsiff Magistrates Court, Shimoga as on 1st September 1980 are as follows :

| | | |
|---|---|---|
| Civil | ... | 514 |
| Criminal | ... | 578 |
| | Total | 1092 |

ಶ್ರೀ ಕಡಿದಾಳ್ ದಿವಾಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಯವರು ಅವರ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾ 'ತೀರ್ಥಹಳ್ಳಿಯಲ್ಲಿ ಒಂದು ಮುನ್ಸೀಫ್ ಕೋರ್ಟನ್ನು ಸ್ಥಾಪನೆ ಮಾಡುವುದಕ್ಕೆ ಮಂಜೂರಾತಿಯನ್ನು ನೀಡಿದ್ದೇನೆ' ಎಂದು ಹೇಳಿದ್ದಾರೆ, ಇವತ್ತೂ ಕೂಡ ಅದೇ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ನಾನು ಈ ಸರ್ಕಾರದವರಿಗೆ ಹಾಗೂ ಮಾನ್ಯ ಕಾನೂನು ಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅಲ್ಲಿ ಆದಷ್ಟು ಶೀಘ್ರವಾಗಿ ಕೋರ್ಟ್ ಕಟ್ಟಡವನ್ನು ಮಾಡಿ ಎಂದು ಹೇಳುತ್ತಾ ಈ ತಿಂಗಳ ಆಖೈರಿನೊಳಗೆ ಅಥವಾ ಆಗಸ್ಟ್ ತಿಂಗಳ ಮೊದಲ ಭಾಗದಲ್ಲಿ ಅಲ್ಲಿ ಕೋರ್ಟನ್ನು ಪುರು ಮಾಡುತ್ತಾರೆಯೇ ಎಂದು ನಾನು ಅವರನ್ನು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಅಲ್ಲಿ ಆ ಕೋರ್ಟನ್ನು ಪ್ರಾರಂಭ ಮಾಡುವುದಕ್ಕೆ ಉಚ್ಚ ನ್ಯಾಯಾಲಯದವರು ಯಾವ ಒಂದು ಡೇಟಿನ್ನು ಫಿಕ್ಸ್ ಮಾಡುತ್ತಾರೆಯೋ ಆಗ ಅದನ್ನು ನಾವು ಪ್ರಾರಂಭ ಮಾಡುತ್ತೇವೆ. ಈ ಸಂಬಂಧದಲ್ಲಿ I have already issued the G.O.

SRI S. M. SHEERNALY CHANDRASHEKAR.—Sir I would like to ask one clarification, whether Hosnagar will also come under the jurisdiction of this court ? I would like to know what is the jurisdiction of this Munsiff court ?

ಅಧ್ಯಕ್ಷರು.—ಈ ಬಗ್ಗೆ ನೋಟಿಫಿಕೇಷನ್ ಇಷ್ಟೂ ಆಗಿಲ್ಲವೆಂದು ನಿನ್ನೆ ಅವರು ಹೇಳಿದರು.

SRI S. M. SHEERNALY CHANDRASHEKAR.—Now Hosanagar is under Sagar jurisdiction. I would like to know whether Hosanagar has been included In the juridiction of this Thirthahalli Court ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಮಾನ್ಯ ಸದಸ್ಯರ ಹತ್ತಿರ ಮಾತನಾಡುತ್ತೇನೆ.